**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.**
**ಸಿಸಿ ನಂಬರ್40/2017**

ಫಿರ್ಯಾದಿ ಸರಕಾರ (ಹಾವೇರಿ ಶಹರ ಪೊಲೀಸ ಠಾಣೆ).

ವಿರುದ್ದ

ಆರೋಪಿಃ 1. ಮಹಬೂಬಸಾಬ ಚಲ್ಲಾಳ
ಸಾಃ ಶಿವಲಿಂಗನಗರ, ಹಾವೇರಿ

2. ಕಮರುನ್ನಿಸಾ ಚಲ್ಲಾಳ
ಸಾಃ ಶಿವಲಿಂಗನಗರ, ಹಾವೇರಿ.

**:ದೋಷಾರೋಪಣೆ:**

ಇದರಲ್ಲಿ ಶ್ರೀ ಪ್ರಕಾಶ.ವಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆ,

ಮೊದಲನೇಯದಾಗಿ ಹಾವೇರಿ ಶಹರ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಹಾವೇರಿ ಪಟ್ಟಣದ ಗುತ್ತಲ ರೋಡ ರೇಲ್ವೆ ಸ್ಟೇಷನಗೆ ಹೋಗುವ ರಸ್ತೆಯ ಎಡಬದಿಯಲ್ಲಿ ಖೈರುನ್ನಬೀರವರ ಹೆಸರಿನಲ್ಲಿ ಸಿಟಿ ಸರ್ವೆ ನಂಬರಃ 2379/14+2378 ಎ/ಎ ಕ್ಷೇತ್ರ 905-43 ಚೌ.ಮಿ ಅಂದರೆ ಸುಮಾರು 9.50 ಗುಂಟೆ ಮನೆ ವ ಖುಲ್ಲಾ ಜಾಗೆಯಿದ್ದು, ಸದರಿ ಆಸ್ತಿಯನ್ನು ಆರೋಪಿತರಾದ ನೀವು ಲಪಟಾಯಿಸುವ ಉದ್ದೇಶದಿಂದ ಒಬ್ಬರಿಗೊಬ್ಬರು ಶಾಮೀಲಾಗಿ ದಿನಾಂಕಃ 15.08.2007 ರಂದು 1 ನೇ ಆರೋಪಿಯಾದ ನಿನಗೆ ಖೈರುನ್ನಬೀರವರು ಭಕ್ಷೀಸ ದೃಢೀಕರಣ ಪತ್ರವನ್ನು ಬರೆದುಕೊಟ್ಟಂತೆ ಖೈರುನ್ನಬಿರವರ ಸಹಿಗಳನ್ನು ಸೃಷ್ಟಿ ಮಾಡಿ, ನಕಲಿ ಭಕ್ಷೀಸ ದೃಢೀಕರಣ ಪತ್ರವನ್ನು ಸೃಷ್ಟಿ ಮಾಡಿದ್ದು, ಸದರಿ ಆಸ್ತಿಯನ್ನು ಖಾತೆ ಬದಲಾವಣೆ ಮಾಡಿಕೊಂಡು ಸಿ.ಟಿ.ಸರ್ವೆ ಅಧಿಕಾರಿಗಳಿಗೆ ಅರ್ಜಿಯನ್ನು ನೀಡಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ *465* ಸಹಕಲಂ *34*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ?

ಎರಡನೇಯದಾಗಿ ಮೇಲೆ ಹೇಳಿದ ಸ್ಥಳದಲ್ಲಿರುವ ಆಸ್ತಿಗೆ ಸಂಬಂಧಿಸಿದಂತೆ ಆರೋಪಿತರಾದ ನೀವು ವಂಚನೆ ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಪಿರ್ಯಾದಿಗೆ ಮತ್ತು ಖೈರುನ್ನಬೀರವರಿಗೆ ವಂಚನೆ ಮತ್ತು ಮೋಸ ಮಾಡಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ *420* ಸಹಕಲಂ *34*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ?

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವು ವಂಚನೆ ಮಾಡುವ ಸಮಾನ ಉದ್ದೇಶದಿಂದ ಮೂಲಭಕ್ಷಿಸ ಪತ್ರವನ್ನು ಸೃಷ್ಟಿ ಮಾಡಿದ್ದು, ಅದನ್ನು ತನಿಖಾ ಸಮಯದಲ್ಲಿ ಹಾಜರುಪಡಿಸುವಂತೆ ಸೂಚನೆ ನೀಡಿದ್ದರೂ, ಕಳೆದು ಹೋಗಿದೆ ಎಂದು ಉತ್ತರ ನೀಡಿ, ಮೂಲಭಕ್ಷಿಸ ಪತ್ರವನ್ನು ನಾಶಪಡಿಸಿದ್ದು, ಕಾರಣ **ಭಾರತೀಯ ದಂಡ ಸಂಹಿತೆ ಕಲಂ *201* ಸಹಕಲಂ *34*** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿರುತ್ತೀರಿ?

ಮೇಲೆ ಹೇಳಿದ ದೋಷಾರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 14.08.2024.

(ಪ್ರಕಾಶ.ವಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.

ಸಿಸಿ ನಂಬರ್ **40/2017**

ದಿನಾಂಕಃ **14.08.2024.**

ಫಿರ್ಯಾದಿ ಸರಕಾರ **(**ಹಾವೇರಿ ಶಹರ ಪೊಲೀಸ ಠಾಣೆ**).**

ವಿರುದ್ದ

ಆರೋಪಿ- **1.** ಮಹಬೂಬಸಾಬ ಚಲ್ಲಾಳ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

**ಉತ್ತರಃ**

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

**ಉತ್ತರಃ**

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**

**ಹಾವೇರಿ.**

ಆರೋಪಿಯಸಹಿ:

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.

ಸಿಸಿ ನಂಬರ್ **40/2017**

ದಿನಾಂಕಃ **14.08.2024.**

ಫಿರ್ಯಾದಿ ಸರಕಾರ **(**ಹಾವೇರಿ ಶಹರ ಪೊಲೀಸ ಠಾಣೆ**).**

ವಿರುದ್ದ

ಆರೋಪಿ- **2.** ಕಮರುನ್ನಿಸಾ ಚಲ್ಲಾಳ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

**ಉತ್ತರಃ**

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

**ಉತ್ತರಃ**

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**

**ಹಾವೇರಿ.**

ಆರೋಪಿಯ ಸಹಿಃ